ಓ ಎಸ್ ನಂಃ 132-17
ಪಿ ಡಬ್ಲ್ಯೂ ಃ 1

ದಿಃ 15-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ ವಿ ಎಸ್ ವಕೀಲರಿಂದ

24. ಪ್ರತಿವಾದಿಗಳಿಗೆ ದಾವಾ ಆಸ್ತಿಯ ದಾಖಲೆಗಳನ್ನು ಕೊಡಲು ತೊಂದರೆ ಇದ್ದಿದ್ದರಿಂದ ಕ್ರಯದ ಕರಾರು ಪತ್ರವನ್ನು ನೇರವಾಗಿ ಕ್ರಯಪತ್ರ ಮಾಡಿಕೊಡುವ ಬದಲು ಮಾಡಿಕೊಡಲಾಯಿತು. ನಿಪಿ8 ರಂತೆ ದಾವಾ ಆಸ್ತಿಯ ಪೂರ್ತಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದಿದ್ದರಿಂದ ಅದು ನೊಂದಣಿಯಾಗುತ್ತದೆ ಎಂದರೆ ನಿಜ. ನಿಪಿ 8 ಪೂರ್ತಿ ಆಸ್ತಿ 1 ನೇ ಪ್ರತಿವಾದಿಯ ಹೆಸರಿನಲ್ಲಿದ್ದಿದ್ದರಿಂದ 11 ಇ ನಕಾಶೆಯ ಮತ್ತು ಇತರೆ ದಾಖಲೆಗಳ ಅವಶ್ಯಕತೆ ಇರುವುದಿಲ್ಲ ದಾವಾ ಆಸ್ತಿಯ ಬಗ್ಗೆ ನೇರವಾಗಿ ಕ್ರಯಪತ್ರವನ್ನು ಮಾಡಿಕೊಡಬಹುದು ಎಂದರೆ ನಿಜ. ದಾವಾ ಆಸ್ತಿಯ ಬಗ್ಗೆ ನಾನು ಕಂದಾಯ ದಾಖಲೆಗಳನ್ನು ಅಂದರೆ ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನಿಜ. ಪ್ರತಿವಾದಿಗಳು ಪ್ರತ್ಯುತ್ತರ ಕೊಟ್ಟಿರುತ್ತಾರೆ ಎಂದು ಹೇಳುವ ಪ್ರತ್ಯುತ್ತರವನ್ನು ನನಗೆ ನ್ಯಾಯಾಲಯಕ್ಕೆ ಸಲ್ಲಿಸಲು ಮತ್ತು ಆ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಹೇಳಲು ನನಗೆ ತೊಂದರೆ ಇರಲಿಲ್ಲ. ದಾವಾ ಆಸ್ತಿ ಹೊನ್ನಯ್ಯ ಎಲ್ಲಾ ಮಕ್ಕಳಿಗೂ ಸೇರಬೇಕಾಗಿದ್ದು ಆದ ಕಾರಣ ಪ್ರತಿವಾದಿಗಳಿಗೆ ದಾವಾ ಆಸ್ತಿಯ ಬಗ್ಗೆ ಕ್ರಯದ ಕರಾರು ಪತ್ರವನ್ನು ಮಾಡಿಕೊಡಲು ಹಕ್ಕು ಇರಲಿಲ್ಲ ಎಂದರೆ ಅವರಿಗೆ ಹಕ್ಕು ಇದೆ ಎಂದು ಕ್ರಯದ ಕರಾರು ಪತ್ರ ಮಾಡಿಸಿಕೊಂಡಿರುತ್ತೇನ ಎಂದು ಹೇಳುತ್ತಾರೆ. ಹೊನ್ನಯ್ಯರವರ ಕುಟುಂಬದಲ್ಲಿ ಯಾವುದೇ ವಿಭಾಗ ಆಗಿಲ್ಲ ಎಂದರೆ ನಿಜ. ಹೊನ್ನಯ್ಯನ ಕುಟುಂಬದವರು ಈವರೆವಿಗೂ ಒಟ್ಟು ಕುಟುಂಬದಲ್ಲಿ ಇದ್ದಿದ್ದರಿಂದ ಪ್ರತಿವಾದಿಗಳಿಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಪ್ರತಿವಾದಿಗಳೇ ಬರೆದುಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಖಂಡಿಕೆ 5 ರಲ್ಲಿ ಪ್ರತಿವಾದಿಗಳು ದಾಖಲೆಗಳನ್ನು ಹಾಜರುಪಡಿಸಲು ಒಪ್ಪಿರುತ್ತಾರೆ ಎಂದು ಹೇಳುವ ಬಗ್ಗೆ ಕ್ರಯದ ಕರಾರು ಪತ್ರದಲ್ಲಿ ನಮೂದು ಇರುತ್ತದೆ. ಒಂದು ಜಮೀನನ್ನು ಖರೀದಿ ಮಾಡುವ ಸಮಯದಲ್ಲಿ ಆ ಜಮೀನಿಗೆ ಸಂಬಂದಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿದ ನಂತರ ಆ ಜಮೀನಿನ ಖರೀದಿ ಮಾತುಕತೆ ಆಗುತ್ತದೆ ಎಂದರೆ ನಿಜ. ದಾವಾ ಆಸ್ತಿಯ ಖರೀದಿ ಮಾತುಕತೆಯಲ್ಲಿ ಎಲ್ಲಾ ದಾಖಲೆಗಳನ್ನು ಪ್ರತಿವಾದಿಗಳು ಹಾಜರುಪಡಿಸಿರಲಿಲ್ಲ ಕ್ರಯಪತ್ರ ಆಗುವಾಗ ಹಾಜರುಪಡಿಸುವುದಾಗಿ ಹೇಳಿದ್ದರು ಎಂದು ಹೇಳುತ್ತಾರೆ.

25. ನಿಪಿ 11 ರಲ್ಲಿ ಪ್ರತಿವಾದಿಗಳ ಸಹಿ ಇರುವುದಿಲ್ಲ ಎಂದರೆ ಮೊದಲನೇ ಪುಟದಲ್ಲಿರುವುದಿಲ್ಲ ಆದರೆ

ನಂತರದ ಪುಟದಲ್ಲಿರುತ್ತದೆ ಎಂದು ಹೇಳುತ್ತಾರೆ. ಪ್ರತಿವಾದಿಗಳು ಸಾಲದ ಭದ್ರತೆಗಾಗಿ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿದ್ದು ಆದರೆ ನಾನು ಮತ್ತು ಸಾಕ್ಷಿದಾರರು ಸೇರಿ ಕ್ರಯದ ಕರಾರು ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳು ಕ್ರಯದ ಕರಾರು ಪತ್ರವನ್ನು ದಾವಾ ಆಸ್ತಿಯ ಖರೀದಿಗೆ ಮಾಡಿಕೊಟ್ಟಿದ್ದೆ ಆಗಿದ್ದಲ್ಲಿ ಕ್ರಯದ ಕರಾರು ಪತ್ರವನ್ನು ನೊಂದಣಿ ಮಾಡಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ತೊಂದರೆ ಇರಲಿಲ್ಲ ಆದರೆ ಪ್ರತಿವಾದಿಗಳು ಕ್ರಯಪತ್ರವನ್ನು ನೊಂದಣಿ ಮಾಡಿಸುವುದಾಗಿ ಹೇಳಿದ್ದರು ಎಂದು ಹೇಳುತ್ತಾರೆ. ಪ್ರತಿವಾದಿಗಳ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ಕ್ರಯದ ಕರಾರು ಪತ್ರವನ್ನು ಸೃಷ್ಟಿಸಿ ಸುಳ್ಳು ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**